## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ:ನಅಇ 150 ಬಿಎಂಆರ್ 2013, ದಿನಾಂಕ:16-09-2013.
2) ಸರ್ಕಾರದ ಆದೇಶ ಸಂಖ್ಯೆ:ನಅಇ 27 ಬಿಎಂಆರ್ 2014, ದಿನಾಂಕ:05-03-2014.
3) ಪತ್ರ ಸಂಖ್ಯೆ:ಬಿಎಂಆರ್‌ಡಿಎ/ಎಂಪಿ/ಎನ್‌ಪಿಎ/01/2012-13, ದಿನಾಂಕ:15-04-2015.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿದ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 13(1) ರನ್ವಯ ಕೆಲವು ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ತಾತ್ಕಾಲಿಕ ಅನುಮೋದನೆ ನೀಡಲಾಗಿತ್ತು.

ನಂತರ, ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 13(1) ರನ್ವಯ 60 ದಿನಗಳ ಕಾಲಾವಕಾಶ ನೀಡಿ ಸಾರ್ವಜನಿಕರಿಂದ ಸ್ವೀಕರಿಸಿರುವ ಸಲಹೆ/ಆಕ್ಷೇಪಣೆಗಳನ್ನು ಪರಿಶೀಲಿಸುವ ಸಂಬಂಧ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ಪತ್ರದಲ್ಲಿ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ನಿಗಧಿತ ಅವಧಿಯೊಳಗೆ ಸ್ವೀಕರಿಸಿರುವ 595 ಆಕ್ಷೇಪಣೆ/ಸಲಹೆಗಳನ್ನು ಪರಿಶೀಲಿಸಿ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇರೆಗೆ ತಾತ್ಕಾಲಿಕ ಅನುಮೋದಿತ ಮಹಾಯೋಜನೆಯನ್ನು ಪರಿಷ್ಕರಿಸಿ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿದ ಮಹಾಯೋಜನೆ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 13(2) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾಯೋಜನೆಯ ನಕ್ಷೆ ಹಾಗೂ ವರದಿ ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿರುತ್ತಾರೆ.

ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು 9071.71 ಹೆಕ್ಟೇರ್ ಪ್ರದೇಶವನ್ನು ನಗರದ ಅಭಿವೃದ್ಧಿಗಾಗಿ ನಗರೀಕರಣದ ಎಲ್ಲೆ ಎಂದು ಪ್ರಸ್ತಾಪಿಸಿ ಮಹಾಯೋಜನೆಯನ್ನು ರೂಪಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ (12) ರಲ್ಲಿ ನಿಗಧಿಪಡಿಸಿರುವ ಅಂಶಗಳನ್ನು ಪರಿಗಣಿಸಿ ನಗರದ ಮುಂದಿನ ಯೋಜಿತ ಬೆಳವಣಿಗೆಗೆ ಪ್ರಸ್ತಾಪಿಸಿರುವ 9,071.71 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 3362.47 ಹೆಕ್ಟೇರ್ (ಶೇ. 39.24), ವಾಣಿಜ್ಯಕ್ಕಾಗಿ 319.53 ಹೆಕ್ಟೇರ್ (ಶೇ.3.73), ಕೈಗಾರಿಕೆಗಾಗಿ 2047.51 ಹೆಕ್ಟೇರ್ (ಶೇ. 23.89) ಸಾರ್ವಜನಿಕ/ಅರೆಸಾರ್ವಜನಿಕ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ 332.20 ಹೆಕ್ಟೇರ್ (ಶೇ.3.88), ಉದ್ಯಾನವನ/ಆಟದ ಮೈದಾನ/ಸ್ಮಶಾನ ಪ್ರದೇಶಕ್ಕಾಗಿ 727.46 ಹೆಕ್ಟೇರ್ (ಶೇ.8.49), ಸಾರ್ವಜನಿಕ ಸೌಲಭ್ಯಕ್ಕಾಗಿ 124.47 ಹೆಕ್ಟೇರ್ (ಶೇ. 1.45), ಸಾರಿಗೆ ಮತ್ತು ಸಂಪರ್ಕಕ್ಕಾಗಿ 1655.78 ಹೆಕ್ಟೇರ್ (ಶೇ.19.32) ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 13(3) ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

...2

Scanned with CamScanner

ಉದ್ದೇಶಿತ ಮಹಾಯೋಜನೆಗೆ ಭೂ ಉಪಯೋಗದ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ. | ಭೂ ಉಪಯೋಗ | ಅನುಮೋದಿತ ಕರಡು ಮಹಾಯೋಜನೆ 2031ರ ಭೂ ಬಳಕೆ ವಿವರ (ಹೆಕ್ಟೇರ್‌ಗಳಲ್ಲಿ) | | ಅಂತಿಮಗೊಳಿಸಿದ ಮಹಾಯೋಜನೆ 2031ರ ಭೂ ಬಳಕೆ ವಿವರ (ಹೆಕ್ಟೇರ್‌ಗಳಲ್ಲಿ) | |
|---|---|---|---|---|---|
| | | ವಿಸ್ತೀರ್ಣ | % | ವಿಸ್ತೀರ್ಣ | % |
| 1 | ವಸತಿ | 3199.61 | 45.49 | 3362.47 | 39.24 |
| 2 | ವಾಣಿಜ್ಯ | 317.09 | 4.51 | 319.53 | 3.73 |
| 3 | ಕೈಗಾರಿಕೆ | 1027.25 | 14.60 | 2047.51 | 23.89 |
| 4 | ಸಾರ್ವಜನಿಕ/ಅರೆ ಸಾರ್ವಜನಿಕ ಮತ್ತು ಸಾರ್ವಜನಿಕ ಸೌಲಭ್ಯ | 295.78 | 4.20 | 332.20 | 3.88 |
| 5 | ಉದ್ಯಾನವನ/ಆಟದ ಮೈದಾನ/ಸ್ಮಶಾನ | 598.85 | 8.51 | 727.46 | 8.49 |
| 6 | ಸಾರ್ವಜನಿಕ ಸೌಲಭ್ಯ | 124.47 | 1.77 | 124.47 | 1.45 |
| 7 | ಸಾರಿಗೆ ಮತ್ತು ಸಂಪರ್ಕ | 1471.09 | 20.91 | 1655.78 | 19.32 |
| | **ಒಟ್ಟು** | **7034.14** | **100** | **8569.42** | **100.00** |
| 8. | ಜಲಾವೃತ ಪ್ರದೇಶ | 305.78 | | 369.70 | |
| 9 | ಟಿ.ಜಿ.ಆರ್. ವಲಯ-3 ರ ಪ್ರದೇಶ (ತ್ಯಾಮಗೊಂಡ್ಲು ನಗರೀಕರಣ ಎಲ್ಲೆಯಲ್ಲಿ ಮಾತ್ರ) | 132.59 | | 132.59 | |
| | **ಒಟ್ಟು** | **7472.51** | | **9071.71** | |

ಸದರಿ ಪ್ರಸ್ತಾವನೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ನಅಇ 150 ಬಿಎಂಆರ್ 2013, ಬೆಂಗಳೂರು ದಿನಾಂಕ: 01-06-2015.**

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುವ ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಅಂತಿಮ ಮಹಾಯೋಜನೆ 2031 ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ ಕಲಂ 13(3) ರನ್ವಯ ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

1) ಈ ಆದೇಶ ಹೊರಡಿಸಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಪ್ರಾಧಿಕಾರವು ಯಾವುದೇ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ;

2) ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲು ಉದ್ದೇಶಿಸಿರುವ Satellite Town Ring Road (STRR), Individual Town Ring Road (ITRR), Intermediate Ring Road (IRR) ಹಾಗೂ Ring Road (RR) ರಸ್ತೆಗಳ ಅಂತಿಮ ಪಂಕ್ತೀಕರಣವನ್ನು ಅಭಿವೃದ್ಧಿಗೆ ಅನುಮೋದಿಸುವ ಮೊದಲು ಪರಿಶೀಲಿಸತಕ್ಕದ್ದು.

3) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ.69(1) ರ ಪ್ರಕಾರ, ಈ ಆದೇಶದ ದಿನಾಂಕದಿಂದ 5 ವರ್ಷಗಳೊಳಗೆ ಉದ್ಯಾನವನ, ಬಯಲು ಜಾಗ, ಆಟದ ಮೈದಾನ ಮತ್ತು ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ ಮೀಸಲಿಟ್ಟ ಜಮೀನುಗಳನ್ನು ನಿಯಮಾನುಸಾರ ಭೂ ಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸುವುದು.

...3

Scanned with CamScanner

4) ಮಹಾಯೋಜನೆಯಲ್ಲಿ ಗುರುತಿಸಲಾಗಿರುವ ಸರ್ವೆ ನಂಬರ್‌ಗಳು, ನಾಲೆ/ಅತಿ ಹೆಚ್ಚು ವಿದ್ಯುತ್ ವಾಹಕ ತಂತಿಗಳು/ಹಾಲಿ ರಸ್ತೆ/ಕೆರೆ/ಕೊಳಗಳಲ್ಲಿ ಯಾವುದಾದರೂ ತಪ್ಪಿದ್ದಲ್ಲಿ ಅಂತಹ ತಪ್ಪುಗಳನ್ನು ಸೂಕ್ತ ದಾಖಲೆಗಳೊಂದಿಗೆ ಸ್ಥಳ ಪರಿಶೀಲಿಸಿ ದೃಢಪಡಿಸಿಕೊಂಡು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಾಧಿಕಾರವು ಸರಿಪಡಿಸಿಕೊಳ್ಳತಕ್ಕದ್ದು;

5) ಮಹಾಯೋಜನೆಯಲ್ಲಿ ಗುರುತಿಸಿರುವ ಅಧಿಕ ವಿದ್ಯುತ್‌ವಾಹಕ ತಂತಿ, ರಸ್ತೆ, ನಾಲೆಯ ಪಂಕ್ತೀಕರಣದಲ್ಲಿ ಹಾಗೂ ಭೂಮಿಯ ಮೇಲೆ ಹಾಲಿ ಇರುವ ಪಂಕ್ತೀಕರಣದಲ್ಲಿ ವ್ಯತ್ಯಾಸವಿದ್ದಲ್ಲಿ, ಇರುವ ಪಂಕ್ತೀಕರಣದನ್ವಯ ಗುರುತಿಸಿದ ನಂತರ ಉಳಿಯುವ ಜಾಗವನ್ನು ಜಮೀನಿಗೆ ಹೊಂದಿಕೊಂಡಿರುವ ಭೂ ಉಪಯೋಗವನ್ನು ನಿಗಧಿಪಡಿಸಬಹುದು;

6) ಹಾಲಿ ರಸ್ತೆಯ ಪಂಕ್ತೀಕರಣವನ್ನು ಮಹಾಯೋಜನೆಯಲ್ಲಿ ತಪ್ಪಾಗಿ ಗುರುತಿಸಿದಂತಹ ಪ್ರಕರಣಗಳಲ್ಲಿ ಸೂಕ್ತ ದಾಖಲೆಗಳೊಂದಿಗೆ (Cadastral Map) ಹಾಲಿ ಭೂಮಿಯ ಮೇಲಿರುವ ರಸ್ತೆ ಪಂಕ್ತೀಕರಣವನ್ನು ರಸ್ತೆ ಅಗಲೀಕರಣ ಮಾಡುವಾಗ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಹಾಗೂ ಮಹಾಯೋಜನೆಯಲ್ಲಿ ಹಾಲಿ ರಸ್ತೆಯನ್ವಯ ಪಂಕ್ತೀಕರಣ ಅಳವಡಿಸಿಕೊಂಡ ನಂತರ ಉಳಿಯುವ ಜಾಗವನ್ನು ಪ್ರಸ್ತುತ ಜಮೀನಿಗೆ ಹೊಂದಿಕೊಂಡಿರುವ ಭೂ ಉಪಯೋಗ (Higher land use) ನಿಗಧಿಪಡಿಸಿಕೊಳ್ಳತಕ್ಕದ್ದು.

ನೆಲಮಂಗಲ ಯೋಜನಾ ಪ್ರದೇಶದ ಮಹಾಯೋಜನೆ-2031 ಕ್ಕೆ ಸಂಬಂಧಿಸಿದ ವರದಿ ಮತ್ತು ಭೂ ಉಪಯೋಗ ಯೋಜನೆಯ ಎಲ್ಲಾ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆ ಹಾಕಿ ಸಂಬಂಧಪಟ್ಟ ಅಧಿಕಾರಿ ಸಹಿ ಮಾಡಲು ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು (ಸದರಿ ಆದೇಶವನ್ನು ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಒದಗಿಸುವಂತೆ ಕೋರುತ್ತಾ).

<u>ಪ್ರತಿ ಇವರಿಗೆ:-</u>

(1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ.
(2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ,
(3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಡಿಗಳ ಕಟ್ಟಡ,
(4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ,
(5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ವಿಕಾಸ ಸೌಧ,
(6) ಮಹಾನಗರ ಆಯುಕ್ತರು, ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
(7) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
(8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆ (KUIDFC), ಬೆಂಗಳೂರು.
(9) ~~ಆಯುಕ್ತರು, ನಗರ ಭೂ ಸಾರಿಗೆ, ಬೆಂಗಳೂರು.~~

...4

Scanned with CamScanner

(10) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.

(11) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್, ಬೆಂಗಳೂರು.

(12) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.

(13) ಮುಖ್ಯ ಕಾರ್ಯನಿರ್ವಹಣಾಧಿಕಾರಿ, National Highway Authority of India, ಬೆಂಗಳೂರು.

(14) ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಲಿಮಿಟೆಡ್ (DDUTTL), ಬೆಂಗಳೂರು.

(15) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

(16) ಜಿಲ್ಲಾಧಿಕಾರಿ, ಬೆಂಗಳೂರು ನಗರ/ಗ್ರಾಮಾಂತರ ಜಿಲ್ಲೆ, ಬೆಂಗಳೂರು.

(17) ಸದಸ್ಯ ಕಾರ್ಯದರ್ಶಿ, ನೆಲಮಂಗಲ ಸ್ಥಳೀಯ ಯೋಜನಾ ಪ್ರಾಧಿಕಾರ, ನೆಲಮಂಗಲ.

(18) ಶಾಖಾ ರಕ್ಷಾ ಕಡತ,

(19) ಹೆಚ್ಚುವರಿ ಪ್ರತಿಗಳು-5.

Scanned with CamScanner